

# ರಾವಣ–ಮಂಡೋದರಿಯರ ಮಾಂಡೋರ್



**ಮಾಂಡೋರ್ ನಗರದ ಗತ ವೈಭವಕ್ಕೆ ಸಾಕ್ಷಿಯಂತಿರುವ ಇಲ್ಲಿನ ಸುಂದರ ಸ್ಮಾರಕಗಳು, ಇತಿಹಾಸದ ಕಥೆಯನ್ನು ಅರಹುತ್ತಿರುವಂತೆ ಕಾಣುತ್ತವೆ.**

■ ಶ್ರೀನಿವಾಸ ಮೂರ್ತಿ ಎನ್.ಎಸ್.

ರಾಜಸ್ಥಾನ ಎಂದರೆ ನೆನಪಾಗುವುದು ವೈಭವದ ಕೋಟೆಗಳು, ಭವ್ಯವಾದ ಅರಮನೆಗಳು. ವೈಭವದಿಂದ ಬದುಕಿದ ರಾಜರ ಮರಣದ ನಂತರವೂ, ಇಲ್ಲಿನ ಸ್ಮಾರಕಗಳಲ್ಲಿನ ಕಲ್ಲಿನ ಕೆತ್ತನೆಗಳು ತಮ್ಮದೇ ಆದ ಕಥೆ ಹೇಳಲು ಕಾದಿರುವಂತೆ ಕಾಣುತ್ತವೆ. ಅಂಥ ಸ್ಮಾರಕಗಳಲ್ಲಿ ಜೋಧಪುರದಲ್ಲಿನ ಮಾಂಡೋರಿನ ಸ್ಮಾರಕಗಳು ಪ್ರಮುಖವಾದವು. ಒಮ್ಮೆ ರಾಜರ ಸ್ಮಶಾನವಾಗಿದ್ದ ಇಲ್ಲಿನ ಸ್ಮಾರಕಗಳು ಈಗ ಉದ್ಯಾನವನವಾಗಿ ಗಮನಸೆಳೆಯುತ್ತಿವೆ.

ರಾಜಸ್ಥಾನ ಪ್ರವಾಸದಲ್ಲಿ ಅಪರೂಪದ ಸ್ಥಳಗಳನ್ನು ಹುಡುಕಿದಾಗ ನಮಗೆ ಸಿಕ್ಕಿದ್ದು ಮಾಡೋರಿನಂಥ ವಿಭಿನ್ನ ಸ್ಥಳ. ಜೋಧಪುರದಲ್ಲಿನ ಕೋಟೆ ಮತ್ತು ಅರಮನೆ ನಡುವೆ ನಮ್ಮ ಆಯ್ಕೆ ಮಾಂಡೋರ್ ಆಗಿತ್ತು. ಮಾಂಡೋರ್ ತಲುಪಿದಾಗ ನಮಗೆ ಹೊಸ ಲೋಕವೇ ತೆರೆದುಕೊಂಡಿತು.

ಜೋಧಪುರದಲ್ಲಿನ ಮಾಂಡೋರ್ ಸುಮಾರು 6ನೇ ಶತಮಾನದಲ್ಲಿ ಮಾರ್ವಾರ್ ಅವರ ಮೊದಲ ರಾಜಧಾನಿಯಾಗಿತ್ತು. ನಂತರದಲ್ಲಿ ರಾಜಧಾನಿ ಜೋಧಪುರಕ್ಕೆ ಬದಲಾಯಿತು. ಗುರ್ಜಾರ್ ಮತ್ತು ಪ್ರತಿಹಾರದ ವಿಘಟನೆ ನಂತರವೂ ಪ್ರತಿಹಾರ ಇಲ್ಲಿ ಆಳ್ವಿಕೆ ಮುಂದುವರೆಸಿದ್ದರು.

ಕೋಟೆಯ ಒಳಗೆ ನಿರ್ಮಾಣವಾಗಿದ್ದ ಹಲವು ದೇವಾಲಯಗಳು ನಂತರದ ಕಾಲದಲ್ಲಿ ಪಾಳುಬಿದ್ದವು. ಇಲ್ಲಿ ಮಹಾರಾಜ ತಖ್ತ್ ಸಿಂಗ್‌ವರೆಗೆ ಹಲವು ರಾಜರಿಗೆ ಮಂದಿರಗಳನ್ನು ನಿರ್ಮಾಣ ಮಾಡಲಾಗಿದ್ದು, ಜಸ್ವಂತ್ ಸಿಂಗ್ ನಂತರದ ಕಾಲದಲ್ಲಿ ಜಸ್ವಂತ್ ತಾಡಾಗೆ ಬದಲಾವಣೆಗೊಂಡಿತು.

ಇಲ್ಲಿನ ಸ್ಮಾರಕಗಳಲ್ಲಿ 1793ರಲ್ಲಿ ನಿರ್ಮಾಣವಾದ ಅಜಿತ್ ಸಿಂಗ್ ಸ್ಮಾರಕ ಅತ್ಯಂತ ಕಲಾತ್ಮಕವಾಗಿದೆ. ರಾಜರ ಸ್ಮಾರಕಗಳ ಜೊತೆಯಲ್ಲಿ ಅಲ್ಲಿನ ಆಡಳಿತಗಾರರ ಛತ್ರಿ ಆಕಾರದ ಸ್ಮಾರಕಗಳು ಗಮನಸೆಳೆಯುತ್ತವೆ. ದೇವಾಲಯದ ಜೊತೆಯಲ್ಲಿ, ಕೆಂಪು ಮರಳುಗಲ್ಲಿನಲ್ಲಿ ನಿರ್ಮಾಣವಾದ ಸ್ಮಾರಕಗಳು ಕಲಾತ್ಮಕ ಕಂಬಗಳು ಹಾಗೂ ಶಿಖರಗಳನ್ನು ಹೊಂದಿವೆ. ಇಲ್ಲಿನ ಹಾಲ್ ಆಫ್ ಹೀರೋಸ್‌ನಲ್ಲಿ, ಒಂದೇ ಬಂಡೆಯಲ್ಲಿ 16 ಜಾನಪದ ವೀರರ ಕೆತ್ತನೆ ಸಂಸ್ಕೃತಿಯ ಅಭಿಮಾನಕ್ಕೆ ನಿದರ್ಶನದಂತಿದೆ. ಪಕ್ಕದಲ್ಲಿಯೇ 33 ಕೋಟಿ ದೇವರುಗಳ ದೇವಾಲಯ ಎಂಬ ಸಭಾಂಗಣವಿದ್ದು, ಹಲವು ದೇವರ ಕೆತ್ತನೆಗಳಿವೆ. ಇಲ್ಲಿನ ವರ್ಣ ಚಿತ್ರಗಳು ಆಸಕ್ತಿ ಹುಟ್ಟಿಸುತ್ತವೆ.

ಇಲ್ಲಿನ ಮತ್ತೊಂದು ವಿಶೇಷ, ರಾವಣನ ದೇವಾಲಯ. ಇದು ಮಂಡೋದರಿಯ ಮೂಲಸ್ಥಳ ಎಂದು ನಂಬಲಾಗಿದ್ದು, ಇಲ್ಲಿ ಅವಳನ್ನು ರಾವಣ ವರಿಸಿದ ಎನ್ನಲಾಗಿದೆ. ಜನಮಾನಸದಲ್ಲಿ ಇನ್ನೂ ರಾವಣನನ್ನು ಅಳಿಯ ಎಂದೇ ನಂಬಲಾಗುತ್ತದೆ.

ಜೋಧಪುರದಿಂದ ಸುಮಾರು 10 ಕಿ.ಮೀ. ದೂರದಲ್ಲಿ ಮಾಂಡೋರ್ ಇದ್ದು, ಸ್ವಂತ ವಾಹನವಿದ್ದಲ್ಲಿ ಸುಲಭವಾಗಿ ತಲುಪಬಹುದು. ಸ್ಥಳೀಯ ವಾಹನ ಸೌಲಭ್ಯವೂ ಇದೆ. ■

